<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>

**C.C. - 22-22** **ಪಿಡಬ್ಲ್ಯೂಃ** **9**

**ಸಿಡಬ್ಲ್ಯೂಃ** **14**

ಸಾಕ್ಷಿದಾರರ ಹೆಸರು ಃ ಸಿದ್ದಲಿಂಗಪ್ಪ ಧಾರವಾಡ

ತಂದೆ ಹೆಸರು ಃ ವೀರಪ್ಪ

ವಯಸ್ಸು ಃ 46 ವರ್ಷ

ಉದ್ಯೋಗ ಃ ಮುಖ್ಯ ಪೇದೆ

ವಾಸಸ್ಥಳ ಃ ಗೋಕುಲ ರೋಡ, ಹುಬ್ಬಳ್ಳಿ ಪೋಲಿಸ ಠಾಣೆ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2021 ರಿಂದ 2025 ಜೂನ್ ವರೆಗೆ ಪೂರ್ವ ಸಂಚಾರಿ ಪೋಲಿಸ ಠಾಣೆ ಹುಬ್ಬಳ್ಳಿ ಯಲ್ಲಿ ಮುಖ್ಯ ಪೇದೆ ಅಂತಾ ಸೇವೆ ಸಲ್ಲಿಸುತ್ತಿದ್ದೆನು.

ದಿಃ 28.9.2021 ರಂದು ಮಃ 2.30 ಗಂಟೆಗೆ ಠಾಣಾಧಿಕಾರಿ ರೇಲ್ವೆ ಅಂಡರ ಬ್ರಿಜ್ ಅಪಘಾತ ವಾಗಿದೆ ಗಾಯಾಳುವನ್ನು ಸ್ಥಳದಲ್ಲಿದ್ದು, ಅವರನ್ನು ಸ್ಥಳಾಂತರಿಸುವಂತೆ ಸೂಚನೆ ನೀಡಿದ ಮೇರೆಗೆ ನಾನು ಸ್ದ..ಳಕ್ಕೆ ಹೋದೆನು, ಅಲ್ಲಿ ಬಹಳ ಜನ ಸೇರಿದ್ದರು. ಅವರ ಪೈಕಿ ನಮ್ಮ ಹವಾಲ್ದಾರ ಹೆಚ್ ಸಿ 1370, ವೈ ಎಂ ಕಿಲ್ಲೇದಾರ ಸಹ ಇದ್ದರು. ಗಾಯಾಳುವನ್ನು ನೋಡಿದಾಗ ಎಡಗಾಲಿಗೆ ಹಾಗೂ ಬೆನ್ನಿಗೆ ಗಾಯವಾಗಿತ್ತು. ಅವನು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ, ಇನ್ನೊಂದು ಮಗು ಸಹ ಇತ್ತು, ಆತನಿಗೆ ತರಚಿದ ಗಾಯವಾಗಿತ್ತು. ಅಲ್ಲೆ ಇದ್ದ ಒಂದು ಆಟೋದಲ್ಲಿ ಗಾಯಾಳುವನ್ನು ಕಿಮ್ಸ ಆಸ್ಪತ್ರೆ, ಹುಬ್ಬಳ್ಳಿಗೆ ರವಾನಿಸಿದೆವು. ನಾನು ಚಾಸಾ-13 ರವರಿಗೆ ಅಪಘಾತ ಹೇಗೆ ಆಯಿತು ಅಂತಾ ಕೇಳಿದೆನು. ಅವರು ನನಗೆ ತಾವು ಸೇವೆಯಲ್ಲಿದ್ದಾಗ ಪಿಂಟೋ ಸರ್ಕಲ್ ಕಡೆಯಿಂದ ಮೋಟಾರ್ ಸೈಕಲ್ ಸವಾರ ಗಾಯಾಳು ಅಂಡರ ಬ್ರಿಜ್ ಕಡೆಯಿಂದ ಬಂದು, ಸಿ ಬಿ ಟಿ ಕಡೆಗೆ ಹೋಗಲು ವಾಹನ ತಿರುಗಿಸಿಕೊಳ್ಳುತ್ತಿದ್ದಾಗ ಹಿಂದಿನಿಂದ ಬಂದ ಹಳದಿ ಕಲರ ಟಿಪ್ಪರ ವಾಹನ ಅತಿ ವೇಗ ಹಾಗೂ ನಿರ್ಲಕ್ಷ್ಯತನದಿಂದ ಬಂದು ಮೋಟಾರ್ ಸೈಕಲ್ ಹಿಂಬದಿಗೆ ಡಿಕ್ಕಿಪಡಿಸಿ ಅಪಘಾತ ಪಡಿಸಿದ್ದಾನೆ ಅಂತಾ ಹೇಳಿದರು. ಸ್ಥಳದಲ್ಲಿ ನವೀನ ಚನ್ನಯ್ಯ ಧಾರಾ ರವರು ಗಾಯಾಳುವಿಗೆ ಪರಿಚಿತನಾಗಿದ್ದನು.

ಆತನನ್ನು ವಿಚಾರಿಸಲಾಗಿ, ಗಾಯಾಳುವಿನ ಹೆಸರು ಶೇಷಮ ಮ್ಯಾಥೂ ತಂದೆಃ ಪ್ರಕಾಶರಾವ ಅಂತಾ ಹೇಳಿದ್ದಾರೆ. ಆಗ ಮಗುವಿನ ಹೆಸರು ಕೇಳಿದಾಗ ಜೈಸನ್ ಅಂತಾ ಹೇಳಿದರು. ಗಾಯಾಳುವಿನ ಬೈಕ್ ನಂಃ ಕೆಎ-25 ಇ ಎಲ್ /1788 ಇರುತ್ತದೆ. ಬೈಕನ್ನು ಟಾಟಾ ಏಸ್ ವಾಹನಲ್ಲಿ ಠಾಣೆಗೆ ರವಾನಿಸಿರುತ್ತೇವೆ. ಟಿಪ್ಪರ ಚಾಲಕನಿಗೆ ಟಿಪ್ಪರ ನ್ನು ಠಾಣೆಗೆ ತರುವಂತೆ ಹೇಳಿ, ಠಾಣೆಗೆ ಕರೆದುಕೊಂಡು ಬಂದಿದ್ದೆವು. ಟಿಪ್ಪರ ಚಾಲಕನ ಹೆಸರು ಕೇಳಲಾಗಿ, ಆತನು ಮಹಮ್ಮದ ಯೂನೂಸ ಜಾಹಾಂಗೀರಸಾಬ ಅನ್ಸಾರಿ ಸಾಃ ಹಳ್ಳಿಕೇರಿ ಅಂತಾ ಹೇಳಿದನು. ಟಿಪ್ಪರ ವಾಹನ ನಂಃ ಕೆಎ-25 ಎಎ /3504 ಇರುತ್ತದೆ. ನಾನು ಈ ಕುರಿತು ಹೇಳಿಕೆ ನೀಡಿದ್ದೇನೆ. ನಾನು ದಿಃ 29.9.2021 ರಂದು ಈ ಪ್ರಕರಣದ ಗಾಯಾಳು ಶೇಷಮ ಮ್ಯಾಥೂ ರವರು ಚಿಕಿತ್ಸೆ ಫಲಕಾರಿಯಾಗದೇ ದಿಃ 28.9.2021 ರಂದು ಮೃತ ಹೊಂದಿರುವ ಬಗ್ಗೆ ತಿಳಿದು, ಮರು ಹೇಳಿಕೆ ನೀಡಿದ್ದೇನೆ. ದಿಃ 30.9.2021 ರಂದು ತನಿಖಾದಿಫಿಕಾರಗಳು ಆರೋಪಿ ತನ್ನ ಹೆಸರನ್ನು ಮಹಮ್ಮದ ಯೂನೂಸ ಜಹಾಂಗಿರಸಾಬ ಅನ್ಸಾರಿ ಅಂತಾ ಸುಳ್ಳು ಹೇಳಿದ್ದು, ಆತನ ನಿಜವಾದ ಹೆಸರು ಮೇಹಬೂಬಸಾಬ ತಂದೆಃ ಫಯಾಜಸಾಬ ನಾಗನೂ ಸಾಃ ರೋಣ ಎಂದು ಇರುತ್ತದೆ ಅಂತಾ ಹೇಳಿದರು. ಈ ಕುರಿತು ಮರು ಹೇಳಿಕೆ ನೀಡಿದ್ದೇನೆ ಅಂತಾ ಹೇಳಿದರು. ದಿಃ 28.9.2021 ರಂದು ತನಿಖಾಧಿಕಾರಿಗಳು ನಿಪಿ.3 ರಂತೆ ಸ್ಥಳ ಪಂಚನಾಮೆ ಮಾಡುವ ಕಾಲಕ್ಕೆ ಅವರ ಆದೇಶದ ಮೇರೆಗೆ ಪಂಚನಾಮೆ ಮಾಡಿದ್ದೇನೆ. ನಿಪಿ.3 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.3-ಸಿ ಎಂದು ಗುರುತಿಸಲಾಯಿತು. ನಿಪಿ.4 ಹಾಗೂ 5 ರಲ್ಲಿ ನಾನು ಇರುತ್ತೇನೆ. ದಿಃಃ 29.9.2021 ರಂದು ತನಿಖಾಧಿಕಾರಿಗಳು ನಿಪಿ.8 ರಂತೆ ಶವ ತನಿಖೆ ಮಾಡುವಾಗ ನಾನು ಇದ್ದು , ಅವರ ಆದೇಶದಂತೆ ತನಿಖೆ ವರದಿ ಬರೆದಿದ್ದೇನೆ, ಸಾಕ್ಷಿ ಸಹಿ ನಿಪಿ.8-ಎ ಎಂದು ಗುರುತಿಸಲಾಯಿತು. ಅದೇ ದಿನ ತನಿಖಾಧಿಕಾರಿಗಳು ನಿಪಿ.6 ರಂತೆ ಪಂಚನಾಮೆ ಕ್ರಮ ಜರುಗಿಸಿ ವಾಹನ ಜಪ್ತಪಡಿಸಿಕೊಳ್ಳುವ ಕಾಲದಲ್ಲಿ ವಾಹನ ಜಪ್ತಪಡಿಸಿಕೊಳ್ಳುವ ಕಾಲದಲ್ಲಿ ನಾನು ಇದ್ದು, ಸದರಿ ಪಂಚನಾಮೆ ನಾನೇ ತಯಾರಿಸಿದ್ದೇನೆ. ಆ ಕಾಲದಲ್ಲಿ ತೆಗೆದ ನಿಪಿ.2 ರಂತೆ ಪೊಟೋದಲ್ಲಿ ನಾನು ಇದ್ದೇನೆ. ಸಾಕ್ಷಿ ಯೂ ನಿಪಿ.2 ರಲ್ಲಿರುವ ವಾಹನಗಳನ್ನು ಗುರುತಿಸಿರುತ್ತಾರೆ. ಆರೋಪಿ ನೋಡಿದರೆ ಗುರುತಿಸುತ್ತೇನೆ, ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲವೆಂದು ಹೇಳಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ವಿ ಬಿ, ವಕೀಲರಿಂದಃ**

ನಾನು ಅಪಘಾತ ವನ್ನು ಕಣ್ಣಾರೆ ನೋಡಿಲ್ಲ. ಅಪಘಾತ ವನ್ನು ಕಣ್ಣಾರೆ ನೋಡದ ಕಾರಣ, ಅದು ಹೇಗೆ ಆಯಿತೆಂದು ಗೊತ್ತಿಲ್ಲ ಅಂದರೆ ಸರಿ. ಸಾಮಾನ್ಯವಾಗಿ ಮೇಲಾಧಿಕಾರಿಗಳು ಹೇಳಿದಂತೆ ಕೆಲಸ ಮಾಡುತ್ತೇವೆ ಅಂದರೆ ಸರಿ. ಚಾಸಾ-13 ರವರು ಹೇಳಿದ ನಂತರ ,ಘಟನಾ ವಿಷಯ ಗೊತ್ತಾಯಿತು ಅಂದರೆ ಸರಿ.

ಪಿಂಟೋ ರೋಡದಲ್ಲಿ ವಾಹನ ಹಾಗೂ ಜನ ದಟ್ಟಣೆ ಇದೆ ಅಂದರೆ ಸರಿ. ಬೈಕ್ ಸವಾರ ಗಾಯಾಳು ಪಿಂಟೋ ರೋಡದಿಂದ ರೇಲ್ವೆ ನಿಲ್ದಾಣದ ಬಲಗಡೆಗೆ ಹೊರಟಿದ್ದನು ಅಂದರೆ ಸರಿ. ಟಿಪ್ಪರ ಪಿಂಟೋ ರೋಡದಲ್ಲಿ ಬಂದು ಗದಗ ರೋಡ ಗೆ ಹೊರಟಿತ್ತು ಅಂದರೆ ಸರಿ. ಟಿಪ್ಪರ ಎಡಗಡೆಗೆ ಹೊರಟಿತ್ತು, ಬೈಕ್ ಬಲಗಡೆಗೆ ಹೊರಟಿತ್ತು ಅಂದರೆ ಸರಿ. ಗಾಯಾಳು ಮದ್ಯಪಾನ ಮಾಡಿ ವಾಹನ ನಡೆಸುತ್ತಿದ್ದನು ಅಂದರೆ ಗೊತ್ತಿಲ್ಲ. ಬೈಕ ಸವಾರ ಕಲ್ಲು ತಾಗಿ ಕುಡಿದು, ನಡೆಸಿದ್ದರಿಂದ ಬಿದ್ದರು ಅಂದರೆ ಸರಿಯಲ್ಲ. ಸದರಿ ವಿಷಯವನ್ನು ಚಾಸಾ-13 ರವರು ಹೇಳಿದರು ಅಂದರೆ ಸರಿಯಲ್ಲ. ವಾಹನಗಳು ಬಹಳ ಓಡಾಡುವುದರಿಂದ ಒಂದು ವಾಹನದಿಂದ ಇನ್ನೊಂದು ವಾಹನ ನಿಧಾನವಾಗಿ ಹೋಗುತ್ತಿದ್ದವು ಅಂದರೆ ಸರಿ. ಗಾಯಾಳು ಕುಡಿದು ಬಿದ್ದದ್ದರಿಂದ ಗಾಯವಾಗಿತ್ತು ಅಂದರೆ ಸರಿಯಲ್ಲ. ಸಿ ಸಿ ಕ್ಯಾಮರಾ ಇತ್ತು ಅಂದರೆ ಸರಿಯಲ್ಲ. ಮೇಲಾಧಿಕಾರಿ ಹಾಗೂ ಚಾಸಾ-13 ವರ ಹೇಳಿಕೆ ಮೇರೆಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಹಿರಿಯ ಅಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಸುಳ್ಳು ಶವ ತನಿಖಾ ವರದಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಗಾಯಾಳು ಮದ್ಯಪಾನ ಮಾಡಿದ ಬಗ್ಗೆ ವರದಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಸುಳ್ಳು ಹೆಸರು ಹೇಳಿದ್ದಾನೆ ಅಂತಾ ಹಾಗೂ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಘಟನೆಗೂ ಹಾಗೂ ಆರೋಪಿಗೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.